ಯೋಗಿ ಶ್ರೀ ಮಟ್ಟು ಹರೀಶ ಮಧ್ಯಸ್ಥ – ಆತ್ಮಾನ್ವೇಷಣೆ
ಹಿಮಾಲಯದಿಂದ ಕನ್ಯಾಕುಮರಿಯವರೆಗೆ

ಆಧ್ಯಾತ್ಮಿಕ ಹಾಗೂ ಸಾಮಾಜಿಕ ಜೀವನದಲ್ಲಿ ನಡೆದು ಬಂದ ದಾರಿ:

ನಮ್ಮ ಭರತ ಖಂಡ ಹಿಂದಿನ ಕಾಲದಿಂದಲೂ ಋಷಿಮುನಿ, ಯೋಗಿಗಳು ಹಾಗೂ ಸಂತ ಸಂದೋಹದವರು ತಮ್ಮ ತಪಸ್ಸಿಗೆ ಹಾಗೂ ಸಮಾಜಕ್ಕೆ ದಾರ್ಶನಿಕರಾಗಿದ್ದ ಪುಣ್ಯಭೂಮಿ ಎಂದು ಪ್ರಖ್ಯಾತವಾಗಿದೆ. ಜಗತ್ತಿನಲ್ಲಿರುವ ಎಲ್ಲಾ ಧರ್ಮಗಳೂ ತಮ್ಮ ಮೂಲ ಬೇರನ್ನು ನಮ್ಮ ಸನಾತನ ಧರ್ಮದಲ್ಲಿಯೇ ಕಂಡುಕೊಳ್ಳುತ್ತಾರೆ. ನಮ್ಮ ಭರತಖಂಡದ ಕರ್ನಾಟಕ ರಾಜ್ಯದ ಕರಾವಳಿ ಪ್ರದೇಶ ಶ್ರೀ ಪರಶುರಾಮ ದೇವರು ಸೃಷ್ಟಿ ಮಾಡಿದ ಪುಣ್ಯಭೂಮಿ ಎಂದು ಪ್ರಾಚೀನ ಪರಂಪರೆಯಿಂದಲೂ ಪ್ರಸಿದ್ಧವಾಗಿದೆ. ಈ ನಾಡಿಲ್ಲಿ ಹಲವು ಋಷಿಮುನಿಗಳು, ಸಂತರುಗಳು ತಪಸ್ಸನ್ನು ಮಾಡಿ ಪ್ರಸಿದ್ಧ ದೇವಸ್ಥಾನಗಳ ಪ್ರತಿಷ್ಠೆಯನ್ನು ಮಾಡಿ, ಪುಣ್ಯ ಭೂಮಿಯನ್ನಾಗಿಸಿದ್ದಾರೆ. ಅಷ್ಟಮಾನಿಷ ವಿದ್ಯೆಯನ್ನು ಅರಿತಂತಹ ಯೋಗೇಶ್ವರರುಗಳಾದ ನವನಾಥರುಗಳು, ಶ್ರೀ ಆದಿಶಂಕರಾಚಾರ್ಯರು, ಶ್ರೀ ಮಧ್ವಾಚಾರ್ಯರು, ಬ್ರಹ್ಮಶ್ರೀ ನಾರಾಯಣ ಗುರುಗಳು, ಭಕ್ತ ಕನಕದಾಸರು, ಭಗವಾನ್ ನಿತ್ಯಾನಂದ ಸ್ವಾಮಿಯವರು, ಶ್ರೀ ರಾಘವೇಂದ್ರ ಸ್ವಾಮಿಗಳವರು, ಶ್ರೀ ಮಾಧಮ ಮಂಗಲ ಪೂಜಾರ್ಯರು ಮುಂತಾದ ಮಹಾಮಹಿಮರು ತಪಸ್ಸುಗೈದು, ಭಕ್ತಿ ಪಂಥವನ್ನು ಸಾರಿ ನಡೆದಾಡಿದ ಈ ಪುಣ್ಯ ಭೂಮಿಯಲ್ಲಿ ಜನಮಾನಸಕ್ಕೆ ಆಧ್ಯಾತ್ಮದ ದಾರಿ ಕಂಡುಕೊಳ್ಳಲು ದಾರ್ಶನಿಕರಾಗಿ, ಪ್ರಸಿದ್ಧ ಮಠ, ಗುಡಿ ಗೋಪುರಗಳ ಪ್ರತಿಷ್ಠೆಗೆ ಕಾರಣರಾಗಿ ಒಂದೇ ಜಾತಿ, ಒಂದೇ ಧರ್ಮ – ಅದು ಸನಾತನ ಧರ್ಮ ಎಂದು ತಿಳಿಸಿ ಇಂದಿಗೂ ಅಮೂರ್ತ ರೂಪದಲ್ಲಿ ಈ ಪುಣ್ಯ ಭೂಮಿಯಲ್ಲಿ ನೆಲೆಸಿದ್ದು ಜನಮಾನಸಕ್ಕೆ ಅನುಗ್ರಹಿಸುತ್ತಿದ್ದಾರೆ. ನಮಗೆ ತಿಳಿದಂತೆ ನಮ್ಮ ಭರತ ಖಂಡದಲ್ಲಿ 210 ಅವಧೂತರುಗಳು ನೆಲೆಸಿದ್ದು ನಮ್ಮ ಸಂಸ್ಕೃತಿ, ಸಂಸ್ಕಾರ ಹಾಗೂ ಪರಂಪರೆಯನ್ನು ಉಳಿಸಿಕೊಂಡು ಬರುತ್ತಿದ್ದಾರೆ. ಇಂತಹವರಲ್ಲಿ ಒಬ್ಬರ ಜನನ ಪುಣ್ಯ ಭೂಮಿ ಪರಶುರಾಮ ಸೃಷ್ಟಿಯ ಉಡುಪಿ ಜಿಲ್ಲೆಯ ಉಚ್ಚಿಲ ಗ್ರಾಮದಲ್ಲಿರುವ ಶ್ರೀ ಮಹಾಲಿಂಗೇಶ್ವರ ದೇವಸ್ಥಾನದ ಬಳ ಇರುವ ತನ್ನ ಅಜ್ಜಿಮನೆಯಲ್ಲಿ ರೋಹಿಣಿ ನಕ್ಷತ್ರದಲ್ಲಿ ಶ್ರೀಮತಿ. ಪುಷ್ಪಾ ಮಧ್ಯಸ್ಥ ಹಾಗೂ ಶ್ರೀ. ವಿಷ್ಣುಮೂರ್ತಿ ಮಧ್ಯಸ್ಥ ದಂಪತಿಗಳ ಮೊದಲ ಸುಪುತ್ರರಾಗಿ ಜನನವಾಯಿತು. ಇವರೇ ನಮ್ಮ ಆಧ್ಯಾತ್ಮಿಕ ಗುರು ಶ್ರೀ ಹರೀಶ ಮಧ್ಯಸ್ಥರು.

<u>ಜನನ ರಹಸ್ಯ:</u> ಇವರ ಜನನ ಆಗುವ ಮೂರು ದಿನ ಹಿಂದೆ ಮೂರು ಯೋಗಿಗಳ ಆಗಮನ, ಅವರ ಅನುಗ್ರಹ ಹಾಗೂ ಶ್ರೀ ಮಹಾಲಿಂಗೇಶ್ವರ ದೇವಸ್ಥಾನದಲ್ಲಿ ಪ್ರಧಾನ ಅರ್ಚಕರಾಗಿದ್ದ ಶ್ರೀ. ಪುಟ್ಟಣ್ಣ ಭಟ್ಟರು (ಸಿದ್ಧಿ ಪುರುಷರು) ಶ್ರೀಮತಿ. ಪುಷ್ಪಾ ಮಧ್ಯಸ್ಥರಿಗೆ "ಯೋಗಿಯ ಜನನವಾಗುತ್ತದೆ ಚಿಂತೆ ಮಾಡಬೇಡ" ಎಂದು ಸಾಂತ್ವಾನಗೈದದ್ದು, ತುಂಬಾ ಆಶ್ಚರ್ಯವಾದ ವಿಷಯವಾಗಿದೆ. ಮಗುವಿನ ಜನನವಾದ ನಂತರ 15 ನಿಮಿಷ ಮಗು ಕಾಣದಿದ್ದಾಗ ಅಜ್ಜಿ ಹಾಗೂ ಹೆರಿಗೆ ಮಾಡಿಸಿದ ಇತರ ಹೆಂಗಸರು ಮಗುವನ್ನು ಹುಡುಕಾಡುತ್ತಿದ್ದರು. ತದನಂತರ ಅಜ್ಜಿಯು ಕುಳತು ಶ್ರೀ ಶಿವ ದೇವರಲ್ಲಿ ಪ್ರಾರ್ಥನೆ ಸಲ್ಲಿಸಿದ ನಂತರ ಮಗು ಅಜ್ಜಿಯ ಮಡಿಲಲ್ಲಿ ಚೇಷ್ಟೆ ಮಾಡುವ ರೀತಿಯಲ್ಲಿ ನಗುತ್ತಿತ್ತು. ಈ ವಿಷಯ ಆ ದಿನಗಳಲ್ಲಿ ಎಲ್ಲರಿಗೂ ಆದ ಆಶ್ಚರ್ಯದ ವಿಷಯವಾಗಿತ್ತು. ಅಜ್ಜಿಯ ಮನೆಯಲ್ಲಿ ಬೆಳೆಯುತ್ತಿದ್ದ ಶ್ರೀ ಹರೀಶ ಮಧ್ಯಸ್ಥ ಅಜ್ಜಿಯ ಒಟ್ಟಿಗೆ ದಿನಾ ಶ್ರೀ ಮಹಾಲಿಂಗೇಶ್ವರ ದೇವಸ್ಥಾನಕ್ಕೆ ಹೋಗುವುದು, ಭೂತಾರಾಧನೆ, ದೈವದ ಕೋಲ, ಯಕ್ಷಗಾನ, ನಾಗಾರಾಧನೆ ಮುಂತಾದ ಧಾರ್ಮಿಕ ಕಾರ್ಯಕ್ರಮಗಳಿಗೆ ಹೋಗುವುದು ಅಲ್ಲದೆ ಅಜ್ಜಿಯ ಶಿಸ್ತಿನ ಜೀವನವನ್ನು ಹಿಂಬಾಲಿಸಿ ತನ್ನನ್ನು ತಾನು ಜೀವನದಲ್ಲಿ ಶಿಸ್ತಿನ ಜೀವನವನ್ನು ಪಾಲಿಸಲಾರಂಭಿಸಿದರು. ಇವರ ಅಜ್ಜಿ ಆಯುರ್ವೇದ ವೈದ್ಯೆ ಆಗಿದ್ದು ಮನೆಗೆ ಬರುವ ರೋಗಿಗಳಿಗೆ ಆಯುರ್ವೇದ ಮದ್ದನ್ನು ನೀಡುವುದು ಅದನ್ನು ತಯಾರಿಸುವುದು, ಇದರಲ್ಲಿಯು ಅಜ್ಜಿಗೆ ಸಹಕರಿಸುತ್ತಿದ್ದರು. ಊರ ಪರವೂರಿನಲ್ಲಿರುವ ದೇವಸ್ಥಾನದ ಜಾತ್ರಾ ಮಹೋತ್ಸವಕ್ಕೆ ಹೋಗುವುದೆಂದರೆ ಎಲ್ಲಿಲ್ಲದ ಸಂತೋಷ. ಇವರ ಹೆಸರೇ ನೋಡಿದರೆ ಹರಿ–ವಿಷ್ಣು, ಈಶ–ಶಿವ, ಹಾಗಿರುವಾಗ ಇವರಿಗೆ ಹರಿಹರರಲ್ಲಿ ಭೇದವಿಲ್ಲ. ಎರಡೂ ದೇವರೂ ಒಂದೇ ಎಂಬ ಭಾವನೆ ಆಗಲೇ ಬಂದು, ಶಿವನಲ್ಲಿ ಐಕ್ಯತೆ ಹೆಚ್ಚಾಗತೊಡಗಿತು.

ಮುಂದಿನ ವಿದ್ಯಾಭ್ಯಾಸಕ್ಕಾಗಿ ತನ್ನ ತಂದೆಯ ಊರಾದ ಮಟ್ಟು ಗ್ರಾಮಕ್ಕೆ ಬಂದರು. ಬಾಲ್ಯದಲ್ಲಿ ತುಂಟತನ ಚೇಷ್ಟೆ, ಶಾಲೆಯ ವಿಚಾರದಲ್ಲಿ ಅನಾಸಕ್ತಿ ಇದ್ದೇ ಇತ್ತು. ತಂದೆಗೆ ತಾಯಿಗೆ ವ್ಯವಸಾಯದ ಕೆಲಸದಲ್ಲಿ ಕೈ ಜೋಡಿಸುತ್ತಿದ್ದರು. ಯಾವ ಕೆಲಸ ಹೇಳಿದರೂ ಆಯಸ ಶ್ರಮವನ್ನು ಲೆಕ್ಕಿಸದೆ ಕೆಲಸ ಮುಗಿಯುವವರೆಗೆ ಆಸಕ್ತಿಯಿಂದ ಕಾರ್ಯವನ್ನು ಮಾಡುತ್ತಿದ್ದರು. ಶಾಲಾ ಸಮಯದಲ್ಲಿ ಇವರಿಗೆ ಸಿಗುತ್ತಿದ್ದುದ್ದು ಇಡೀ ವರ್ಷಕ್ಕೆ ಒಂದೇ ಜೊತೆ ಸಮವಸ್ತ್ರ. ಶಾಲೆಗೆ ನಡೆದುಕೊಂಡೇ ಹೋಗುವುದು, ಎಲ್ಲಾ ಜಾತಿಯ ಮಕ್ಕಳೊಂದಿಗೆ ಪ್ರೀತಿಯ ಗೆಳೆತನ ದಿನಾ ಮನೆಯಲ್ಲಿ ದೇವಸ್ಥಾನದಲ್ಲಿ ಆಗುವ ಭಜನೆ ಕಾರ್ಯಕ್ರಮ ಹೀಗೆ ಎಲ್ಲಾ ವಿಷಯದಲ್ಲೂ ಆಸಕ್ತಿ ಹೊಂದಿದ್ದರು. ತನಗೆ ಬಿಡುವಿನ ಸಮಯ ಇರುವಾಗ ಮನೆಯ ಹತ್ತಿರ ಇರುವ ಸಮುದ್ರ ಬದಿಯಲ್ಲಿ ಹೋಗಿ ಕುಳಿತುಕೊಳ್ಳುವುದು ಸೃಷ್ಟಿಯ ಬಗ್ಗೆ ಚಿಂತನೆ ಸಮುದ್ರ ಅಲೆಗಳನ್ನೇ ದೂರ ದೂರಕ್ಕೆ ನೋಡುತ್ತಾ ತನ್ನ ಮನಸ್ಸನ್ನು ಅಂತರ್ಮುಖಕ್ಕೆ ಕೊಂಡೊಯ್ಯುತ್ತಿದ್ದರು. ಹಸುವಿನ ಆರೈಕೆ, ನಾಯಿಯನ್ನು ಸಾಕುವುದು ಇತರ ಪ್ರಾಣಿ ಪಕ್ಷಿಗಳ ಮೇಲೆ ಪ್ರೀತಿ, ಮರಗಿಡಗಳನ್ನು ನೆಡುವುದು ಇದೆಲ್ಲ ಅವರಿಗೆ ಪ್ರಕೃತಿಯ ಮೇಲಿನ ಪ್ರೀತಿಯನ್ನು ತೋರಿಸುತ್ತದೆ. ಬಾಲ್ಯದ ವಯಸ್ಸಿನಲ್ಲಿ ದೇವಸ್ಥಾನಗಳ ಪೂಜೆ, ತಂತ್ರ, ಮಂತ್ರಗಳ ಅರ್ಥ, ಮೂರ್ತಿಯ ವಿಶೇಷತೆಗಳು ಮುಂತಾದ ವಿಷಯಗಳಲ್ಲಿ ಗಮನಕೊಟ್ಟು ಅದನ್ನು ಆಳವಾಗಿ ತಿಳಿದುಕೊಳ್ಳುವ ಪ್ರಯತ್ನ ಮಾಡುತ್ತಿದ್ದರು. ಬಾಲ್ಯದಿಂದಲೇ ಯಕ್ಷಗಾನದಲ್ಲಿ ಆಸಕ್ತಿ, ಹಾಗೂ ಹಲವಾರು ಪಾತ್ರವನ್ನು ಮಾಡುತ್ತಿದ್ದರು. ಅವರು ಹೇಳುವಂತೆ ದಕ್ಷಯಜ್ಞ, ಕೃಷ್ಣಸಂಧಾನ, ಗದಾಯುದ್ಧ, ದೇವಿಮಹಾತ್ಮೆ, ವಿಜವಾಗಿಯೂ ಕಣ್ಣಿರು ಬರಿಸುವ ಪ್ರಸಂಗಗಳಾಗಿತ್ತು. ಹೀಗೆ ಮಹಾ ಭಾರತ ರಾಮಾಯಣ, ಪುರಾಣಗಳಲ್ಲಿ ಬರುವ ಹೆಚ್ಚಿನ ಪಾತ್ರಗಳ ಬಗ್ಗೆ ಆಳವಾದ ಯೋಚನೆ ಮಾಡುತ್ತಿದ್ದು. ಆ ಕಾಲ ಹೇಗಿರಬಹುದು ಎಂತಹ ಶಕ್ತಿಗಳನ್ನು ಆ ಕಾಲದವರು ಹೊಂದಿದ್ದರು ಇದಕ್ಕೆ ಕಾರಣಗಳನ್ನು ಹುಡುಕಲು ಪ್ರಯತ್ನ ಮಾಡುತ್ತಿದ್ದರು. ಆ ಕಾಲದ ವಿಜ್ಞಾನ ಎಷ್ಟು ಮುಂದುವರಿದಿತ್ತು ಎಂದು ಚಿಂತನೆ ನಡೆಸುತ್ತಿದ್ದರು. ಆ ಸಮಯದಲ್ಲಿ ಅವರ ಕೈಗೆ ಸಿಕ್ಕಿದ್ದು ಶ್ರೀ ಮನು ಅವರು ಸಂಶೋಧನೆ ಮಾಡಿ ಬರೆದ ಪುಸ್ತಕ – 'ಮಹಾಸಂಪರ್ಕ', ಇದನ್ನು ಓದಿದ ನಂತರ ಇನ್ನೂ ಆಳವಾದ ಸಂಶೋಧನೆ ಮಾಡುತ್ತಿದ್ದರು. ಇವರ ಬಾಲ್ಯದ ಕಾಲದಲ್ಲಿ ಹೆಚ್ಚಿನ ದೇಗುಲಗಳಲ್ಲಿ ಬ್ರಾಹ್ಮಣರಿಗೆ ಮಾತ್ರ ಊಟ ಯಾಕೆ? ಇತರ ಜಾತಿಯವರಿಗೂ ಅನ್ನ ಪ್ರಸಾದ ಸಿಗಬೇಕು ಎಂದು ಆ ಕ್ರಮವನ್ನು ವಿರೋಧಿಸುತ್ತಿದ್ದರು ಹಾಗೂ ಅನ್ಯ ಜಾತಿಯವರಿಗೂ ಅನ್ನ ಪ್ರಸಾದ ದೊರೆಯುವ ಹಾಗೆ ಮಾಡಿದ್ದಾರೆ. ಒಂದೇ ಜಾತಿ, ಒಂದೇ ಧರ್ಮ ಎಂಬುದನ್ನು ಯುವಕನಾಗಿರುವಾಗಲೇ ತನ್ನ ಅರಿವಿಗೆ ತಂದು ಕೊಂಡಿದ್ದರು ಹಾಗೂ ಪಾಲಿಸುತ್ತಿದ್ದರು. ಅಜ್ಜಿ ಯಾವಾಗಲೂ ಹೇಳುವ ರಾಮಾಯಣ, ಮಹಾಭಾರತ, ಭಾಗವತ, ಹರಿವಂಶ ಹಾಗೂ ಪುರಾಣಗಳ ಕಥೆಗಳನ್ನು ಕೇಳಿ ನೆನಪಿನಲ್ಲಿ ಇಟ್ಟುಕೊಳ್ಳುತ್ತಿದ್ದರು. ನಿಜಕ್ಕೂ ಇವರ ನೆನಪು ಶಕ್ತಿ ಹಾಗೂ ದೂರದರ್ಶಿತ್ವ ಬಾಲ್ಯದಿಂದಲೇ ಅದ್ಭುತವಾಗಿತ್ತು.

ವಿದ್ಯಾಭ್ಯಾಸ ಮಾಡುತ್ತಿರುವ ಸಮಯದಲ್ಲಿ ದಿನಾ ಉಡುಪಿಯಲ್ಲಿರುವ ಶ್ರೀ ಚಂದ್ರಮೌಳೀಶ್ವರ, ಶ್ರೀ ಅನಂತೇಶ್ವರ, ದೇವರ ದರ್ಶನ ಮಾಡಿ ಶ್ರೀ ಕೃಷ್ಣನ ದರ್ಶನ ಮುಗಿಸಿ ಭೋಜನ ಶಾಲೆಯಲ್ಲಿ ದೂರ ದೂರ ದಿಂದ ಆಗಮಿಸಿದ ಭಕ್ತರಿಗೆ ಅನ್ನಪ್ರಸಾದ ಬಡಿಸುವ ಸೇವೆಯನ್ನುಗೈದು ಹೆಚ್ಚಿನ ರಾತ್ರಿ ಶ್ರೀ ಭಂಡಾರಕೇರಿ ಮಠದಲ್ಲಿ ಹೊರಗೆ ಮಲಗುತ್ತಿದ್ದರು. ಇದರಿಂದಾಗಿ ಇವರು ಉಡುಪಿ ಅಷ್ಟಮಠದ ಎಲ್ಲಾ ಸ್ವಾಮೀಜಿಯವರಿಗೆ ತುಂಬಾ ಹತ್ತಿರವಾದರು. ಬಾಲ್ಯದಲ್ಲಿ ಶಿರೂರು ಮಠದಲ್ಲಿ ನಡೆದ ಅಷ್ಟಮಂಗಲ ಪ್ರಶ್ನೆಯಲ್ಲಿ ಪಾಲ್ಗೊಂಡು ಸ್ವಾಮೀಜಿಯವರಿಗೆ ಬೇಕಾದ ಸೇವೆಯನ್ನು ಸಲ್ಲಿಸುತ್ತಿದ್ದರು. ಉಡುಪಿ ದೇಗುಲದ ನಾಡೆಂದು ಪ್ರಸಿದ್ಧಿಯನ್ನು ಪಡೆದಿದೆ. ಉಡುಪಿಯ ವಿಚಾರದಲಿ ಆಳವಾದ ಅಧ್ಯಯನ ಮಾಡಲು ಪ್ರಯತ್ನಿಸಿದರು ಹಾಗೂ ತುಂಬಾ ವಿಷಯವನ್ನು ತಿಳಿದುಕೊಂಡರು. ಅಲ್ಲದೇ ಶ್ರೀ ಬನ್ನಂಜೆ ಗೋವಿಂದ ಆಚಾರ್ಯ, ಶ್ರೀ ಪಾವಂಜೆ ಗುರುರಾಜ ಭಟ್ಟರು, ಶ್ರೀ ರಾಘವೇಂದ್ರ ಉಪಾಧ್ಯಾಯರು ಮುಂತಾದ ಜ್ಞಾನಿಗಳಿಂದ ತಮ್ಮ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳುವ ಪ್ರಯತ್ನ ಮಾಡುತ್ತಿದ್ದರು. ಜ್ಞಾನಿಗಳ ಒಡನಾಟದಲ್ಲಿ ಹೆಚ್ಚಿನ ಸಮಯ ಕಳೆಯುತ್ತಿದ್ದರು. ಇಷ್ಟರಲ್ಲಿ ಅವರ ಪದವಿ ಮುಗಿದು ಉತ್ತಮವಾದ ಉದ್ಯೋಗದ ಅನ್ವೇಷಣೆಯಲ್ಲಿ ಇದ್ದರು. ಇದೇ ಸಮಯದಲ್ಲಿ ಶ್ರೀ ಅದಮಾರು ಮಠದ

ಸ್ವಾಮೀಜಿಯವರು ಕರೆದು ಅವರ ವಿದ್ಯಾ ಸಂಸ್ಥೆ ನವದೆಹಲಿಗೆ ಶ್ರೀ ಹರೀಶ ಮಧ್ಯಸ್ಥರನ್ನು ಉದ್ಯೋಗಕ್ಕೆ ಕಳುಹಿಸಿಕೊಟ್ಟರು.

ಬಾಲ್ಯದಿಂದಲೂ ರಾಷ್ಟ್ರೀಯ ಸ್ವಯಂ ಸೇವಕ ಸಂಘದಲ್ಲಿ ಎಲ್ಲಿಲ್ಲದ ಆಸಕ್ತಿ ಪ್ರತಿದಿನ ಶಾಖೆಯನ್ನು ತಪ್ಪಿಸುತ್ತಿರಲಿಲ್ಲ. ಬಾಲ್ಯದಿಂದಲೇ ಸನಾತನ ಧರ್ಮ, ರಾಷ್ಟ್ರಧರ್ಮ, ಸಮಾಜಮುಖ ಕೆಲಸದಲ್ಲಿ ತೊಡಗಿಸಿಕೊಂಡಿದ್ದರು. ಎಲೆಮರೆಯ ಕಾಯಿಯಾಗಿಯೇ ಸಂಘದ ಪ್ರತಿಯೊಂದು ಕೆಲಸದಲ್ಲಿ ತೊಡಗಿಸಿಕೊಂಡಿದ್ದರು. ಸಂಘದೊಂದಿಗೆ ಇದ್ದ ಒಡನಾಟ ಅವರಲ್ಲಿ ಶಿಸ್ತನ್ನು ಇನ್ನೂ ಜಾಸ್ತಿ ಮಾಡಿತು.

ದೆಹಲಿಗೆ ಹೋದ ನಂತರ ಶ್ರೀ ಅದಮಾರು ಮಠದ ಸಂಸ್ಥೆಯಲ್ಲಿ ಕೆಲವರ್ಷ ದುಡಿದರು. ಹಿಮಾಲಯದ ಯೋಗಿಗಳ ಇಚ್ಛೆ ಏನಿತ್ತೋ? ಯಾರಿಗೂ ತಿಳಿಯದು. ಶ್ರೀ ಗುರು ದತ್ತಾತ್ರೇಯರ ಇಚ್ಛೆ ಏನಿತ್ತೋ? ಯಾರಿಗೂ ತಿಳಿಯದು. ದೆಹಲಿಯಲ್ಲಿ ನಡೆದ ಒಂದು ಘಟನೆಯಿಂದ ಮಾನಸಿಕವಾಗಿ ತುಂಬಾ ನೊಂದಿರುವ ಇವರು ಪವಿತ್ರ ಜಾಗದಲ್ಲಿ ದೇಹವನ್ನು ಬಿಡಬೇಕು ಎಂದು ದೆಹಲಿಯಿಂದ ಲಕ್ನೋ–ನೇಪಾಳ ಮಾರ್ಗವಾಗಿ ೩೮ ದಿನ, ೩೨೦ಕ್ಕೂ ಹೆಚ್ಚು ಕಿಲೋಮೀಟರ್, ಸಿಕ್ಕಿದಲ್ಲಿ ಹುಲ್ಲು ಮತ್ತು ಎಲೆಯನ್ನು ತಿಂದು, ನೀರು ಕುಡಿದು ಕಾಲ್ನಡಿಗೆಯಲ್ಲಿ ಮಾನಸ ಸರೋವರಕ್ಕೆ ತಲುಪಿದರು. ತುಂಬಾ ನೋವಿನಲ್ಲಿ ಅಲ್ಲಿಗೆ ಹೋದಾಗ ಒಬ್ಬ ಯೋಗಿಯು ಇವರಿಗೆ ಸಾಂತ್ವಾನಗೈದು ಅವರ ಗುರುಗಳು ಇರುವ ಗುಹೆಗೆ ಕರೆದುಕೊಂಡು ಹೋಗಿ ಪರಿಚಯಿಸಿದರು. ಇವರೇ ಬಾಬಾ ನಾಗೇಂದ್ರನಾಥ – ನಾಥಪಂತವನ್ನು ಅನುಸರಿಸುವ ಯೋಗಿಗಳು. "ಇಲ್ಲಿಗೆ ಬರಲು ಯಾಕೆ ಇಷ್ಟು ದಿನ ಕಾದೆ ನೀನು?" ಬಹಳ ವರ್ಷಗಳಿಂದ ಕಾಯುತ್ತ ಇರುವ ಹಾಗೆ ಪ್ರಶ್ನಿಸಿದರು. ಶ್ರೀ ಹರೀಶ ಮಧ್ಯಸ್ಥರಿಗೆ ಇದರ ಯಾವ ಅರಿವೂ ಇರಲಿಲ್ಲ. ಇದೆಲ್ಲಾ ಮೊದಲಬಾರಿ ಆಕಸ್ಮಿಕವಾಗಿ ಆದ ವಿಷಯ. ಇದಕ್ಕೆ ನಾವು ಹೇಳುವುದು– ಎಲ್ಲದಕ್ಕೂ ಯೋಗಬೇಕು, ಯೋಗ್ಯತೆ ಆಮೇಲೆ ದೊರಕುತ್ತದೆ. ಕಾಲಗರ್ಭದಲ್ಲಿ ಎಲ್ಲವೂ ಅಡಗಿದೆ. ನಂತರ ಗುರುಗಳು ಇವರಿಗೆ ಕಿವಿಯಲ್ಲಿ ರಹಸ್ಯವಾದ ಮಂತ್ರ ಉಪದೇಶ ಮಾಡಿ ತಲೆಗೆ ಕೈಯನ್ನಿಟ್ಟು ಹರಸಿದರು. ತದನಂತರ ತನ್ನ ಮನಸ್ಸು ದೇಹ ಎಲ್ಲವೂ ನಿಯಂತ್ರಣಕ್ಕೆ ಬಂದು ಶ್ರೀ ಹರೀಶ ಮಧ್ಯಸ್ಥರು ಸಮಾಧಿ ಸ್ಥಿತಿಗೆ ಹೋಗಿದ್ದರು. ಸಮಾಧಿ ಸ್ಥಿತಿಯಿಂದ ಏಳುವಾಗ ಸುಮಾರು 18 ತಿಂಗಳುಗಳೇ ಕಳೆದಿದ್ದವು. ಗುರುಗಳು ಇವರನ್ನು ಕರೆದು "ನಿನ್ನ ಕರ್ತವ್ಯ ಮಾಡುವುದು ತುಂಬಾ ಇದೆ. ಊರಿಗೆ ಹೋಗು ಕಾಲ ಕಾಲಕ್ಕೆ ನಿನಗೆ ಮನಸ್ಸಿನ ಸಂದೇಶದ ಮೂಲಕ ನಿನ್ನ ಕರ್ತವ್ಯದ ವಿವರಣೆ ಸಿಗುವುದು. ಉಪದೇಶ ಕೊಟ್ಟ ಮಂತ್ರಗಳನ್ನು ಮಾಡುತ್ತಾ ಇರು ಎಂದು ಹರಸಿ ಅವರಲ್ಲಿ ಇದ್ದ ಶ್ರೀ ನರಸಿಂಹ ದಂಡವನ್ನು ಇವರಿಗೆ ಕೊಟ್ಟು ಕಳುಹಿಸಿದರು. ಇವರನ್ನು ಕಳುಹಿಸಿಕೊಡುವ ಮುಂಚೆ "ಜನ ಮಾನಸದ, ಚರಾಚರ ಜೀವಿಗಳ ನೋವು ಹಾಗೂ ರಕ್ಷಣೆ ಮಾಡು, ಒಂದೇ ಜಾತಿ, ಒಂದೇ ಧರ್ಮದ ಅಡಿಯಲ್ಲಿ ಬದುಕು, ಅರಿವೇ ಗುರು, ನಿನಗೆ ಏನು ಗೊತ್ತಿಲ್ಲ ಎಂದು ಗೊತ್ತಾಗುವ ಸ್ಥಿತಿಗೆ ಅದಷ್ಟು ಬೇಗ ಬಾ, ಮೋಕ್ಷದ ಸ್ಥಿತಿಯಲ್ಲಿರು, ತನ್ನತನವನ್ನು ಬಿಟ್ಟುಬಿಡು, ಜನರಲ್ಲಿ ಆಧ್ಯಾತ್ಮದ ಬೀಜವನ್ನು ಬಿತ್ತು" ಎಂದು ಉಪದೇಶ ಮಾಡಿದರು. ಶ್ರೀ ಹರೀಶ ಮಧ್ಯಸ್ಥರಿಗೆ ಆಗ ಅರ್ಹತೆ ಇರುವ ಎಲ್ಲಾ ವಿದ್ಯೆಗಳನ್ನು ಕ್ಷಣಮಾತ್ರದಲ್ಲಿ ದಯಪಾಲಿಸಿದರು. ಅದ್ಭುತವೆಂದರೆ ಲಕ್ಷ ಲಕ್ಷ ಯೋಗಿಗಳು ಋಷಿಮುನಿಗಳು, ಸಂತರುಗಳು, ಅನ್ನನೀರಿಲ್ಲದೆ ಹಿಮಾಲಯದಲ್ಲಿ ತಪಸ್ಸನ್ನು ಆಚರಿಸುತ್ತಿರುವುದು ಕಣ್ಣಾರೆ ಕಂಡು ವಿಸ್ಮಯಗೊಂಡಿದ್ದಾರೆ. ಇದರ ರಹಸ್ಯವನ್ನು ಗುರುಗಳಿಂದ ಕೇಳಿ ತಿಳಿದುಕೊಂಡಿದ್ದಾರೆ.

ನಂತರ ದೆಹಲಿಗೆ ಬಂದು ಅಲ್ಲಿರುವ ಅವರ ಗೆಳೆಯ ಶ್ರೀ ಗುರುಮಿತ್ ಸಿಂಗ್, ಶ್ರೀ ಅಜಯ ಸೆಹರಾವತ್ ಮುಂತಾದವರಿಗೆ ತನ್ನ ಅನುಭವವನ್ನು ಹಂಚಿಕೊಂಡು ಸ್ವಲ್ಪ ಸಮಯ ಅಲ್ಲಿಯೇ ಇದ್ದು ತನ್ನ ಊರಾದ ಮಟ್ಟುವಿಗೆ ಬಂದು ಮನೆಯಲ್ಲಿ 6 ತಿಂಗಳು ಕಳೆದು, ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ಚೆನ್ನೈಗೆ ಹೋದರು. ಅಲ್ಲಿ ಅಮೇರಿಕಾದ ಜಾಹಿರಾತು ಸಂಸ್ಥೆಯಲ್ಲಿ ಉದ್ಯೋಗ ಮಾಡುತ್ತ, ತನ್ನ ಸ್ನಾತಕೋತ್ತರ ಪದವಿಯಲ್ಲಿ ಬಂಗಾರದ ಪದಕವನ್ನುಗಳಿಸಿ ವಿದ್ಯಾಭ್ಯಾಸವನ್ನು ಸಂಪೂರ್ಣಗೊಳಿಸಿದರು. ಈ ಸಮಯದಲ್ಲಿ ಇವರಲ್ಲಿರುವ ದೈವೀಕ ಶಕ್ತಿ ಚೆನ್ನೈಯಲ್ಲಿ, ತಮಿಳುನಾಡಿನಲ್ಲಿ ಪ್ರಸಿದ್ಧಿ ಪಡೆದು ನೋವಿನಲ್ಲಿರುವ ಭಕ್ತಾದಿಗಳು ಇವರ ಬಳಿ ಬರಲು ಆರಂಭಿಸಿದರು. ಉದ್ಯೋಗದ ಜೊತೆಗೆ ಆಧ್ಯಾತ್ಮಿಕ ಜೀವನವನ್ನು ಆರಂಭಿಸಿದರು.

ಶ್ರೀಶೈಲ ಮಲ್ಲಿಕಾರ್ಜುನ ದೇವರ ದರ್ಶನಕ್ಕೆ ಹೋದವರು ಕೃಷ್ಣಾನದಿ ದಡದಲ್ಲಿ ಕಾಡಿನಲ್ಲಿರುವ ಮಾತೆ ಅಕ್ಕಮಹಾದೇವಿ ತಪಸ್ಸನ್ನುಗೈದ ಗುಹೆಯಲ್ಲಿ ಆರು ತಿಂಗಳು ಧ್ಯಾನಾಸ್ಥರಾಗಿದ್ದರು, ಹೊನ್ನಾವರದ ಹತ್ತಿರ ಶ್ರೀ ಕರಿಕಾನ ಪರಮೇಶ್ವರಿ ದೇವಿಯ ಸನ್ನಿಧಾನದಲ್ಲಿ ತಾಯಿಗೆ ತನ್ನನ್ನು ಅರ್ಪಿಸಿ, ಭಗವಾನ್ ಶ್ರೀ ಶ್ರೀಧರ ಸ್ವಾಮಿಗಳ ದರ್ಶನ ಪಡೆದದ್ದು, ಕೇದಾರನಾಥದ ಹತ್ತಿರ ಇರುವ ತ್ರಿಯುಗ ನಾರಾಯಣ ಸನ್ನಿಧಾನದ ಬಳಿಯಿರುವ ಗುಹೆಯಲ್ಲಿ ಹಿಮದ ಮೇಲೆ ಕೂತು 6 ತಿಂಗಳು ಸಮಾಧಿ ಸ್ಥಿತಿಯಲ್ಲಿ ಧ್ಯಾನ ಮಾಡಿದ್ದು, ಹೀಗೆ ಹೇಳುತ್ತಾ ಹೋದರೆ ಸಾಧನೆಯ ವಿವರಣೆ ಬೆಳೆಯುತ್ತಾ ಹೋಗುತ್ತದೆ. ತನ್ನ ನೋವನ್ನು ಯಾರಿಗೂ ಹೇಳದೆ ಎಲ್ಲರೂ ಸಂತೋಷವಾಗಿ ಇರಬೇಕೆಂದು ಬಯಸುತ್ತಿದ್ದರು. ಚೆನ್ನೈಯಲ್ಲಿ ಸುನಾಮಿ ಬಂದಾಗ ಭೀಕರವಾದ ನೆರೆ ಬಂದಾಗ ಜನರ ನೋವಿಗೆ ಸ್ಪಂದಿಸಿ ಸಹಾಯದ ಹಸ್ತ ನೀಡಿದರು. ಇವರಲ್ಲಿ ನೋವನ್ನು ಹೇಳಿಕೊಂಡು ಬರುವ ಬಡವರ ಹಾಗೂ ಆದಿವಾಸಿಗಳ ಮಕ್ಕಳನ್ನು ಆಯ್ಕೆ ಮಾಡಿ ತನ್ನ ಖರ್ಚಿನಿಂದ ಮಕ್ಕಳಿಗೆ ಇಷ್ಟವಿದ್ದ ವಿದ್ಯಾಭ್ಯಾಸವನ್ನು ಕೊಡಿಸುತ್ತಿದ್ದರು. ಹೀಗೆ ಇಷ್ಟರವರೆಗೆ 48 ಮಕ್ಕಳಿಗೆ ವಿದ್ಯಾಭ್ಯಾಸವನ್ನು ಕೊಡಿಸಿ ಎಲ್ಲಾ ಮಕ್ಕಳು ಉತ್ತಮವಾದ ಉದ್ಯೋಗದಲ್ಲಿದ್ದು ತಮ್ಮ ಬಾಳನ್ನು ಒಳ್ಳೆಯ ರೀತಿಯಲ್ಲಿ ನಡೆಸುತ್ತಿದ್ದಾರೆ. ಸದ್ಯ 5 ಮಕ್ಕಳು ಇವರ ಉಸ್ತುವಾರಿಯಲ್ಲಿ ವಿದ್ಯಾಭ್ಯಾಸವನ್ನು ಮಾಡುತ್ತಿದ್ದಾರೆ. 10 ವರ್ಷಗಳ ಕಾಲ ಚೆನ್ನೈಯಲ್ಲಿ ಇದ್ದು ಸಾವಿರಾರು ಜನರ ಮನಸ್ಸಿಗೆ ಸಾಂತ್ವಾನ ನೀಡಿ ಮಂಗಳೂರಿಗೆ ಬಂದು ಉದ್ಯೋಗ ಮಾಡುತ್ತಿದ್ದರು. ಆ ಸಮಯದಲ್ಲಿ ದೇವಿಯ ಪ್ರೇರಣೆಯಿಂದ ಉಲ್ಲಾಳ ೨ ಕೆರೆ ಸನ್ನಿಧಿಯಲ್ಲಿ ಸಹಸ್ರಬಾಹು ಮಹಾಕಾಳಿಯ ಅವಿರತ ತಪಸ್ಸುಗೈದು ಮಹಾತಾಯಿಯ ದರ್ಶನ ಪಡೆದು ಅವಳನ್ನು ಒಲಿಸಿಕೊಂಡು ಅವಳನ್ನು ತನ್ನ ಒಳಗೆ ಇರುವಂತೆ ಪ್ರಾರ್ಥನೆ ಮಾಡಿ ಅವಳನ್ನು ಮಾಸಿಕ ಪೂಜೆ ಮಾಡಲು ಆರಂಭಿಸಿದರು. ಶ್ರೀ ಸಹಸ್ರಭುಜ ಮಹಾಕಾಳಿಯು ಸದಾ ಇವರ ಒಳಗೆ ಇದ್ದು ಆರಾಧನೆಯನ್ನು ಪಡೆಯುತ್ತಿದ್ದಾಳೆ ಹಾಗೂ ಇವರ ಸಂಪರ್ಕಕ್ಕೆ ಬರುವ ಜನಮಾನಸಕ್ಕೆ ಅನುಗ್ರಹಿಸುತ್ತಿದ್ದಾಳೆ. ಇವರ ವಿಶೇಷತೆ ಏನೆಂದರೆ ಬುದ್ಧನಿಗೆ ಬುದ್ಧನಾಗಿ, ಅಹಂಕಾರಿಗಳಿಗೆ ಅಹಂಕಾರಿಯಾಗಿ, ಕೋಪಿಷ್ಟರಿಗೆ ಕೋಪದ ರೂಪದಲ್ಲಿ, ಶಾಂತಿಗರಿಗೆ ಶಾಂತವಾಗಿ, ಭಕ್ತರಿಗೆ ಅವದೂತನಾಗಿ ಕಾಣಿಸಿಕೊಳ್ಳುತ್ತಾರೆ. ಅವರವರ ಯೋಚನೆಗಳಲ್ಲಿ ಬಂದ ಆಕೃತಿಯಂತೆ ಹಾಗೂ ಭಾವನೆಗಳಂತೆ ಕಾಣಿಸಿಕೊಳ್ಳುತ್ತಾರೆ.

ಅಷ್ಟು ದೊಡ್ಡದಾದ ಶಕ್ತಿಯನ್ನು ತನ್ನೊಳಗೆ ಇಟ್ಟುಕೊಂಡ ಮೇಲೆ ಲೌಕಿಕ ಜಗತ್ತಿನಲ್ಲಿ ತುಂಬಾ ನೋವನ್ನು ಅನುಭವಿಸಿದರು. ಅವಮಾನವನ್ನು ಅನುಭವಿಸಿದರು. ಆದರೂ ಎಲ್ಲವನ್ನು ಪರಾಶಕ್ತಿಗೆ ಅರ್ಪಿಸಿ ನೋವನ್ನು ನುಂಗಿದರು ಹಾಗೂ ಒಂದು ವರ್ಷ ಅಜ್ಞಾತವಾಸದಂತೆ ತನ್ನ ಹೆತ್ತವರ ಒಟ್ಟಿಗೆ ಇದ್ದರು. ಇದರಿಂದಾಗಿ ಅವರ ಒಳಗೆ ಜಾಗೃತವಾಗಿರುವ ಆಧ್ಯಾತ್ಮಿಕ ಅಗ್ನಿಜ್ವಾಲೆಯು ಇನ್ನೂ ವೃದ್ಧಿಯಾಯಿತು.

ಅದೃಷ್ಟವಶಾತ್ ಈ ಸಮಯದಲ್ಲಿ ಸನಾತನ ಧರ್ಮ ಸಂಸ್ಥೆಯಿಂದ ಉದ್ಯೋಗಕ್ಕಾಗಿ ಕರೆ ಬಂದು ನವದೆಹಲಿಗೆ ತೆರಳಿದರು. ಪ್ರತಿ ಹುಣ್ಣಿಮೆದಿನ ಹರಿದ್ವಾರಕ್ಕೆ ಹೋಗಿ ಗಂಗಾ ಸ್ನಾನ, ಧ್ಯಾನ ಮಾಡುತ್ತಿದ್ದರು. ನವದೆಹಲಿಯಲ್ಲಿರುವಾಗಲೂ ಸಾವಿರಾರು ಜನರ ನೋವಿಗೆ ಸ್ಪಂದಿಸಿದರು. ಈ ಸಮಯದಲ್ಲಿ ಅಸ್ಸಾಂನಲ್ಲಿರುವ ಶ್ರೀ ಕಾಮಾಕ್ಯ ದೇವಸ್ಥಾನಕ್ಕೆ ತೆರಳಿ, ಶ್ರೀ ಯೋಗಿನಿ ತಂತ್ರ, ಕುಲಾಚಾರ ತಂತ್ರ, ಶ್ರೀ ವಿದ್ಯೆಯನ್ನು ಅಲ್ಲಿನ ತಂತ್ರಿಗಳಿಂದ ಉಪದೇಶ ಪಡೆದು ಕಠಿಣ ಸಾಧನೆ ಮಾಡಿ ಎಲ್ಲಾ ಆಸೆಗಳನ್ನು ಮೆಟ್ಟಿ ನಿಂತರು. ಶ್ರೀ ಕಾಮಾಕ್ಯ ದೇವಿಗೆ ತನ್ನದೇ ಆದ ರಕ್ತವನ್ನು ಕೊಟ್ಟು ತನ್ನನ್ನು ತಾನು ಸಮರ್ಪಿಸಿಕೊಂಡರು. ಇದು ಇವರಿಗೆ ಅಷ್ಟಮಾನಿಷ ವಿದ್ಯೆಯನ್ನು ಕಲಿಯಲು ಪ್ರೇರೇಪಿಸಿತು ಹಾಗೂ ಅದರ ಸಾಧನೆಯಲ್ಲಿ ನಿರತರಾದರು.

ಭಾರತ ದೇಶವನ್ನು 6–7 ಬಾರಿ ಸುತ್ತಾಡಿ 100ಕ್ಕೂ ಮೇಲೆ ಅವಧೂತರುಗಳು, ಸಿದ್ಧಿಪುರುಷರುಗಳ ದರ್ಶನಗೈದು, ಅವರೊಂದಿಗೆ ಇದ್ದು, ಸೇವೆಯನ್ನು ಮಾಡಿದ್ದರಿಂದ ಅವರಿಗೆ ತಿಳಿದಿರುವ ಆಧ್ಯಾತ್ಮಿಕ ವಿದ್ಯೆಯನ್ನು ಶ್ರೀ ಹರೀಶ ಮಧ್ಯಸ್ಥರಿಗೆ ಧಾರೆ ಎರದು ಕೊಟ್ಟು ಈ ವಿದ್ಯೆಯನ್ನು ಮುಂದುವರಿಸಿಕೊಂಡು ಹೋಗಬೇಕೆಂದು ಈ ವಿದ್ಯೆ ಜಗತ್ತಿಗೆ ಸಹಾಯ ಆಗಬೇಕೆಂದು ಈ ಎಲ್ಲಾ ವಿದ್ಯೆಗಳನ್ನು ಉಳಿಸಿ ಮುಂದೆ ಹೋಗುವಂತೆ ಮಾಡುವ ದೊಡ್ಡ ಜವಾಬ್ದಾರಿಯನ್ನು ಕೊಟ್ಟರು. ಈ ನಿಟ್ಟಿನಲ್ಲಿ ತನ್ನ ಬಳಿ ಬರುವ ಅರ್ಹ ವ್ಯಕ್ತಿಗಳಿಗೆ ಕೆಲವು ಮಂತ್ರದ ಉಪದೇಶಗಳನ್ನು ಮಾಡಿ ಸಾಧನೆಯ ಮಾರ್ಗದಲ್ಲಿ ಕಳಿಸಿದರು. ಪ್ರಸ್ತುತ ಇವರು ಎಲೆ ಮರೆ ಕಾಯಿಯಾಗಿಯೇ ಇದ್ದು ಅಪಾರವಾದ ಭಾವನಾ

ಪ್ರಪಂಚದ ಭಕ್ತರನ್ನು ಹೊಂದಿದಾರೆ. ಚಾಣಕ್ಯ ಚಂದ್ರಗುಪ್ತನನ್ನು ಬೆಳೆಸಿದ ಹಾಗೆ, ಶ್ರೀ ರಾಮಕೃಷ್ಣ ಪರಮಹಂಸರು ಶ್ರೀ ವಿವೇಕಾನಂದರನ್ನು ಲೋಕದ ಕಲ್ಯಾಣಕ್ಕಾಗಿ ಬೆಳೆಸಿದ ಹಾಗೆ ಇವರು ಕೂಡ ಕೆಲವು ಯುವಕರನ್ನು ಈ ದೂರದೃಷ್ಟಿಯೊಂದಿಗೆ ಬೆಳೆಸುತ್ತಿದ್ದಾರೆ ಹಾಗೂ ಅವರನ್ನು ಸಾಧನೆಯ ಹಾದಿಯಲ್ಲಿ ಹೋಗಲು ಅನುವು ಮಾಡಿಕೊಟ್ಟಿದ್ದಾರೆ.

ಶ್ರೀಯುತ ಹರೀಶ ಮಧ್ಯಸ್ಥರು ಭಾರತದೇಶವನ್ನು ಸುತ್ತಾಡುವ ಸಮಯದಲ್ಲಿ ಎಲ್ಲಾ ರಾಜ್ಯಗಳಲ್ಲಿ ಕಾಡಿನಲ್ಲಿ ಹಾಗೂ ನಾಡಿನಲ್ಲಿ ನೆಲೆಸಿರುವ ಆದಿವಾಸಿಗಳನ್ನು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಜನರನ್ನು ಭೇಟಿ ಮಾಡಿ ಅವರೊಂದಿಗೆ ಜೀವನವನ್ನು ಮಾಡಿ ಅವರ ಸಂಸ್ಕೃತಿ, ಸಂಸ್ಕಾರ, ಜಾನಪದ ಹಾಡುಗಳು ಮತ್ತು ನೃತ್ಯಗಳು ಅವರ ಕುಟುಂಬ ವ್ಯವಸ್ಥೆ, ಕಾಡಿನಲ್ಲಿ ಸಿಗುವಂತಹ ಗಿಡಮೂಲಿಕೆಗಳು ಮತ್ತು ಅದರ ಉಪಯೋಗ, ಅವರ ಪ್ರಕೃತಿ ಪೂಜೆಯ ವಿಶೇಷತೆ, ಅವರ ಪರಂಪರೆಯ ಕತೆಗಳು, ಅವರ ಹಬ್ಬ ಹರಿದಿನಗಳು, ಅವರ ಸಂಪ್ರದಾಯ ಮುಂತಾದ ವಿಷಯಗಳನ್ನು ತಿಳಿದುಕೊಂಡಿರುತ್ತಾರೆ. ಶ್ರೀ ಹರೀಶ ಮಧ್ಯಸ್ಥರ ಸಂಶೋಧನೆಯಂತೆ ಆದಿವಾಸಿಗಳು ನಮ್ಮ ಭಾರತ ದೇಶದ ಮೂಲ ನಿವಾಸಿಗಳು. ಅವರನ್ನು ಕಡೆಗಣಿಸಿದ್ದೇ ಆದಲ್ಲಿ ನಮ್ಮ ಪ್ರಾಚೀನ ಪರಂಪರೆಯ ಅದ್ಭುತವಾದ ಜ್ಞಾನವನ್ನು ಮುಂದಿನ ಪೀಳಿಗೆಯು ಕಳೆದುಕೊಳ್ಳುತ್ತದೆ. ಆದಿವಾಸಿಗಳೊಂದಿಗೆ ಜೀವನವನ್ನು ಮಾಡಿ ನಿಜವಾದ ಪ್ರಕೃತಿ ಆರಾಧನೆ, ದೈವತ್ವದ ಆರಾಧನೆಯ ಮಹತ್ವವನ್ನು ತಿಳಿದುಕೊಂಡು, ಅನುಸರಿಸಿ ತಮ್ಮಲ್ಲಿ ಬರುವ ಜನಮಾನಸಕ್ಕೆ ಅರಿವನ್ನು ಮೂಡಿಸುತ್ತಿದ್ದಾರೆ. ಹೆಚ್ಚಿನ ಜನರಿಗೆ ಆದಿವಾಸಿಗಳು ಮತ್ತು ಅವರ ಸಂಪ್ರದಾಯ ಗೊತ್ತಿಲ್ಲದೆ ಇರುವುದರಿಂದ ಜಗತ್ತಿನ ಜನರಿಗೆ ತಿಳಿಸಬೇಕೆಂದು ಆದಿವಾಸಿಗಳ ಬಗ್ಗೆ ಆಂಗ್ಲ ಭಾಷೆಯಲ್ಲಿ ಟ್ರೈಬ್ಸ ಆಫ್ ಇಂಡಿಯಾ ಎಂಬ ಪತ್ರಿಕೆಯನ್ನು ಪ್ರಕಟಿಸುತ್ತಿದ್ದಾರೆ. ಇಂತಹ ಪತ್ರಿಕೆ ಜಗತ್ತಿನಲ್ಲೇ ಮೊದಲ ಪರಿಕಲ್ಪನೆಯಾಗಿದೆ. ತಮ್ಮದೇ ಆದ ಶಿಷ್ಯರ ಮೂಲಕ ಇದನ್ನು ಪ್ರಕಟಿಸುತ್ತಿದ್ದಾರೆ. ತಮ್ಮ ಜೀವನದ ಪ್ರಯಾಣದಲ್ಲಿ ೫೦೦–೬೦೦ ರವರಗೆ ಆದಿವಾಸಿ ಪಂಗಡಗಳನ್ನು ಭೇಟಿ ಮಾಡಿ ಅವರೊಂದಿಗೆ ಜೀವನ ಮಾಡಿ ಅವರಲ್ಲಿರುವ ಪ್ರಾಚೀನ ವಿದ್ಯೆಗಳನ್ನು ಕಲಿಯುವಲ್ಲಿ, ತಿಳಿದುಕೊಳ್ಳುವುದರಲ್ಲಿ ಸಫಲರಾಗಿದ್ದಾರೆ.

ಮಕ್ಕಳಿಗೆ ವಿದ್ಯಾಭ್ಯಾಸ ಕೊಡುವ ಕೆಲಸ, ಬಡವರಿಗೆ ಸಹಾಯ ಹಸ್ತ ನೀಡುವ ಕೆಲಸ, ಅಲ್ಲದೆ ಸನಾತನ ಧರ್ಮದ ನಿಜವಾದ ಅರ್ಥ, ಅದರ ಸಂಸ್ಕೃತಿ ದೇವಸ್ಥಾನಗಳ ಪ್ರಾಮುಖ್ಯತೆ, ಶಿಲ್ಪಕಲೆ, ನಾಟ್ಯ ಶಾಸ್ತ್ರ, ಸಂಗೀತ, ಭಾರತದ ಮೂಲ ಆದಿವಾಸಿಗಳು, ಯೋಗ, ಆಯುರ್ವೇದ, ವೇದಗಳು, ಮಂತ್ರಗಳ ಪ್ರಾಮುಖ್ಯತೆ, ಭಗವದ್ಗೀತೆಯ ತಿರುಳು, ಮುಂದಿನ ಪೀಳಿಗೆಗೆ ತಿಳಿಸಲು ಯುವಕರಲ್ಲಿ ಪ್ರಜ್ಞೆ ಮೂಡಿಸಲು ಜಗತ್ತಿಗೆ ಸನಾತನ ಧರ್ಮದ ಶ್ರೇಷ್ಠತೆ ತಿಳಿಸಲು ಇಂಡಿಯನ್ ಟೆಂಪಲ್ ಎಂಬ ಇಂಗ್ಲೀಷ್ ಪತ್ರಿಕೆಯನ್ನು 2014 ಜನವರಿಯಲ್ಲಿ ಆರಂಭಿಸಿದರು. ಹಾಗೂ ಜಗತ್ತಿನಾದ್ಯಂತ ೫ ಲಕ್ಷ ಜನ ಓದುಗರನ್ನು ಈ ಪತ್ರಿಕೆ ಹೊಂದಿದೆ.

2–3 ವರ್ಷ ಪತ್ರಿಕೆಗೆ ಸರಿಯಾದ ಬೆಂಬಲ ಸಿಗದೆ ಕಷ್ಟ ಪಟ್ಟರು, ಇದಕ್ಕೋಸ್ಕರ ಭಾರತ ದೇಶದ ಹೆಚ್ಚಿನ ಸಂತರುಗಳು, ಆಧ್ಯಾತ್ಮಿಕ ಗುರುಗಳನ್ನು, ಧಾರ್ಮಿಕ ಹಾಗೂ ರಾಜಕೀಯ ಮುಖಂಡರುಗಳನ್ನು ಭೇಟಿ ಮಾಡುತ್ತಿದ್ದರು. ಆದಿವಾಸಿಗರ ಸ್ಥಳಕ್ಕೆ ಹೋಗಿ ಅವರೊಂದಿಗೆ ಜೀವನ ಮಾಡಿ ಅವರ ಸಂಸ್ಕೃತಿಯನ್ನು ತಿಳಿದರು. ಅವರು ಪಟ್ಟ ಕಷ್ಟ ಇಂದಿಗೆ ಫಲ ನೀಡಿ ಈಗ ಇಂಡಿಯನ್ ಟೆಂಪಲ್ ಪತ್ರಿಕೆ ಪ್ರಸಿದ್ಧಿಪಡೆದು ದಿನೇ ದಿನೇ ಬೆಳೆಯುತ್ತಿದೆ. ಆದಿವಾಸಿಗಳಿಗೆಂದೆ ಮೀಸಲಾದ ಇಂಗ್ಲೀಷ್ ಪತ್ರಿಕೆ "ಟ್ರೈಬ್ಸ್ ಆಫ್ ಇಂಡಿಯ"ವನ್ನು ತನ್ನ ಶಿಷ್ಯರ ಮೂಲಕ ಆರಂಭಿಸಿದ್ದಾರೆ.

ಆಧ್ಯಾತ್ಮಿಕ ವಿಷಯದಲ್ಲಿ ಮಂತ್ರ ಉಪದೇಶ ಕೊಡುವುದು, ಧೀಕ್ಷೆ, ಧ್ಯಾನ ಕಲಿಸುವುದು, ಶ್ರೀ ವಿದ್ಯೆ, ಶ್ರೀ ಯೋಗಿನಿ ತಂತ್ರ, ಈಶ್ವರೀಯ ಕ್ರಿಯಾ, ಕುಂಡಲಿನೀ ಜಾಗ್ರತಿ ಕ್ರಿಯೆ, ಮನಸ್ಸನ್ನು ಶಾಂತಗೊಳಿಸುವ ಕ್ರಿಯೆ, ಮನಸ್ಸು ದೇಹ ಆತ್ಮದ ಚಿಂತನೆ, ಮರಣ ಹಾಗೂ ಮೃತ್ಯುವಿನ ನಿಜವಾದ ಅರ್ಥ, ಭಗವದ್ಗೀತೆಯ ಮಹತ್ವ ಇಂದಿನ ಮತ್ತು ಮುಂದಿನ ಪೀಳಿಗೆಗೆ ತಿಳಿಸುವುದು, ಪುರಾಣ, ರಾಮಾಯಣ, ಮಹಾಭಾರತದ ಕಥೆಗಳನ್ನು ತತ್ವ ದರ್ಶನವಾಗಿ ತಿಳಿಸುವುದು, ಜನ ಮಾನಸದ ನೋವನ್ನು ತೆಗೆದುಕೊಳ್ಳುವುದು, ಆಡಂಬರ ಇಲ್ಲದ ಪೂಜೆಗೆ ಪ್ರಾಶಸ್ತ್ಯ, ಕ್ಷುದ್ರ ಶಕ್ತಿಗಳ ನಿವಾರಣೆ, ಮುಂತಾದ ಕ್ರಿಯೆಗಳಲ್ಲಿ ತನ್ನನ್ನು ತೊಡಗಿಸಿಕೊಂಡಿದ್ದಾರೆ.

ಒಂದೇ ಜಾತಿ, ಒಂದೇ ಧರ್ಮ– ಸನಾತನ ಧರ್ಮ ಹಾಗೂ ರಾಷ್ಟ್ರಧರ್ಮ ಇದರಿಂದಾಗಿ ಮಾತ್ರ ನಮ್ಮ ಭಾರತ ದೇಶ ಬಲಿಷ್ಠವಾಗಲು ಸಾಧ್ಯ ಎಂಬ ಉಪದೇಶವನ್ನು ಎಲ್ಲೆಡೆ ಸಾರುತ್ತಾ ಬಂದಿದ್ದಾರೆ. ಆ ಕಾರಣದಿಂದಾಗಿ ಉಡುಪಿಯ ಪಾಪನಾಶಿನಿ ನದಿ ದಡದಲ್ಲಿ ಶ್ರೀ ಗುರುವನ, ಶ್ರೀ ಋಷಿವನ, ಶ್ರೀ ಗಾಯನವನವನ್ನು ಮಾಡಿ ಎಲ್ಲಾ ಜಾತಿ ವರ್ಗದ ಗುರುಗಳನ್ನು ಪ್ರತಿಷ್ಠೆ ಮಾಡಿ ಆರಾಧಿಸಬೇಕೆಂಬ ಸಂಕಲ್ಪ ಮಾಡಿದ್ದಾರೆ. ಹಾಗೂ ಶಂಕು ಸ್ಥಾಪನೆಯ ಶುಭ ಕಾರ್ಯ ಡಿಸೆಂಬರ್ 4 2022 ರಂದು ಶ್ರೀ ಶ್ರೀ ಶ್ರೀ ಪರಮಹಂಸ ಶ್ರೀಕಾಂತಾ ನಂದಸರಸ್ವತಿ ಮಹಾರಾಜರವರ ದಿವ್ಯ ಸಾನಿಧ್ಯ, ಅನುಗ್ರಹದಲ್ಲಿ ಅಲ್ಲದೇ ಎಲ್ಲಾ ಜಾತಿಯ ಮಠದ ಸ್ವಾಮೀಜಿಗಳು, ಧಾರ್ಮಿಕ, ರಾಜಕೀಯ ಮುಖಂಡರುಗಳು ಹಾಗೂ ಸಹಸ್ರಾರು ಭಕ್ತಾಭಿಮಾನಿಗಳ ಸಮ್ಮುಖದಲ್ಲಿ ನೆರವೇರಿತು. ಈ ಮಹತ್ತರವಾದ ಯೋಜನೆಯನ್ನು ಅವರ ಗುರುವಿನ ಆದೇಶದಂತೆ ಆರಂಭಿಸಿದ್ದಾರೆ. ಹಾಗೆ ಇನ್ನೊಂದು ಬೃಹತ್ ಯೋಜನೆ ಇವರ ಸಂಕಲ್ಪದಲ್ಲಿ ಇರುವ ಹಾಗೆ ಭರತ ಖಂಡದ ಮುಕುಟ ಪ್ರಾಯವಾದ ಭೂಲೋಕದ ಸ್ವರ್ಗವಾದ ಕಾಶ್ಮೀರದಲ್ಲಿ ಎಲ್ಲಾ ರಾಜ್ಯಗಳ ಪ್ರಖ್ಯಾತ ಗುರುಗಳ ಗುಡಿಯನ್ನು ಪ್ರತಿಷ್ಠೆ ಮಾಡಿ ಹಿಮಾಲಯ ರಾಜ್ಯದಲ್ಲಿ ಸನಾತನ ಧರ್ಮವನ್ನು ಉಳಿಸುವ ಮಹತ್ತರವಾದ ಕಾರ್ಯಕ್ಕೆ ಪಣ ತೊಟ್ಟಿದ್ದಾರೆ. ಹಿಮಾಲಯದ ಬದರಿನಾಥದಲ್ಲಿರುವ ಮಾನ ದಲ್ಲಿ ಶ್ರೀ ವ್ಯಾಸ ಗುಹೆಯ ಹತ್ತಿರ ಸಣ್ಣದಾದ ಕುಠೀರವನ್ನು ಕಟ್ಟಿಕೊಂಡು ತಮ್ಮ ಕೊನೆಯ ಕಾಲವನ್ನು ಅಲ್ಲಿ ಕಳೆಯಬೇಕೆಂದು ನಿರ್ಧರಿಸಿದ್ದಾರೆ.

ಇವರ ಹತ್ತಿರ ಬರುವ ಜನಮಾನಸಕ್ಕೆ ಇವರು ತಿಳಿಸಿಕೊಡುವ ಪ್ರಾರ್ಥನೆ ಏನೆಂದರೆ "ಓ ಮೂಲ ಗುರುವೇ ನಾನಿಡುವ ಹೆಜ್ಜೆ ಹೆಜ್ಜೆಯು ನಿನ್ನದಾಗಲಿ, ನಾ ಆಡುವ ಮಾತೆಲ್ಲವೂ ನಿನ್ನದಾಗಲಿ, ನಾ ಮಾಡುವ ಕರ್ತವ್ಯವೆಲ್ಲವೂ ನಿನ್ನದಾಗಲಿ, ನಾನು ಶೂನ್ಯ, ನನಗೆ ಸಿಗುವ ಮಾನ, ಅವಮಾನಗಳೆಲ್ಲಾ ನಿನ್ನ ಪಾದಕಮಲಕ್ಕೆ ಅರ್ಪಿಸುವೆ, ಓ ಮೂಲ ಗುರುವೇ ನಿನಗೆ ಸಂಪೂರ್ಣ ಶರಣು ಶರಣು ಶರಣಯ್ಯ".

"ಅರಿವೇ ಗುರು, ಪ್ರಕೃತಿಯ ಆರಾಧನೆ, ರಕ್ಷಣೆ, ಹರಿವ ನೀರಾಗು ಮೋಕ್ಷದ ಸಾಗರವನ್ನು ಸೇರು, ಹೊರಗೆ ನೋಡಿದ್ದು ಸಾಕು ಒಳಗೆ ನೋಡು, ನಿನ್ನೊಳಗೆ ಬ್ರಹ್ಮಾಂಡ ಇದೆ, ಮನಸ್ಸು ಮಗುವಿನಂತಾಗಲಿ, ಎಲ್ಲರೊಂದಿಗೆ ಇದ್ದು ಇಲ್ಲದವನಾಗು, ನಾನು ಶೂನ್ಯ ಎಂಬುದು ತಿಳಿ, ಜಗನ್ನಿಯಾಮಕನೊಬ್ಬನಿದ್ದಾನೆ – ಶರಣಾಗು, ಗುರುವಿಗೆ ನಿಜವಾದ ಶರಣಾಗತಿ, ನಿಜವಾದ ಭಕ್ತಿಯಿಂದ ಮೋಕ್ಷದ ಮಾರ್ಗ" ಹೀಗೆ ತನಗೆ ಅರಿವಿಗೆ ಬಂದ ಉಪದೇಶವನ್ನು ಶ್ರೀ ಹರೀಶ ಮಧ್ಯಸ್ಥರು ಮಾಡುತ್ತಿರುತ್ತಾರೆ. ಜನಮಾನಸಕ್ಕೆ ಇವರಿಂದ ತಮ್ಮ ಪ್ರಶ್ನೆಗಳಿಗೆ, ಸಂಕಷ್ಟಗಳಿಗೆ ಸಾಂತ್ವಾನ ದೊರೆಯುತ್ತದೆ ಹಾಗೂ ಜನರು ಇದರ ಪ್ರಯೋಜನ ಪಡೆದುಕೊಳ್ಳುತ್ತಿದ್ದಾರೆ.

ಆಸಕ್ತರ ಎಲ್ಲಾ ರೀತಿಯ ಪ್ರಶ್ನೆಗಳಿಗೆ ಸಮಾಧಾನಕರ ಉತ್ತರವನ್ನು ನೀಡಲು ಶಕ್ತರಾಗಿದ್ದಾರೆ. ಎಲ್ಲಾ ವಿಷಯ ಗೊತ್ತಿದ್ದು ಗೊತ್ತಿಲ್ಲದಂತೆ ತನ್ನ ಆಧ್ಯಾತ್ಮಿಕ ಜೀವನವನ್ನು ನಡೆಸುತ್ತಿದ್ದಾರೆ.

ಸಂಶೋಧನಾ ತಂಡ: ಡಾ॥ ರೂಪ ಐಯ್ಯರ್, ಆಧ್ಯಾತ್ಮ ಚಿಂತಕರು, ಸಿನಿಮಾ ನಿರ್ಮಾಪಕರು ಮತ್ತು ಕಲಾವಿದರು, ಶ್ರೀ. ನಾಗರಾಜ ಶರ್ಮ, ಬೆಂಗಳೂರು, ಡಾ॥ ಚೂಡಾಮಣಿ ನಂದಗೋಪಾಲ್, ಸಂಶೋಧಕರು ಡಾ॥ ಅಜಯ್ ಶುಕ್ಲ, ತತ್ವಜ್ಞಾನಿ, ಕಾಶ್ಮೀರ, ಶ್ರೀನಗರ, ಶ್ರೀಮತಿ. ತ್ರುಶಾಲ್ ಸನ್ಮಾನ್, ಯೋಗ ಗುರು, ನವದೆಹಲಿ, ಶ್ರೀ. ಸಂಜಯ್ ಸಿನ್ಹಾ, ಬೆಂಗಳುರು

ವಿಷಯ ಹಾಗೂ ಸಂಶೋಧನೆಗೆ ಸಹಕಾರ ಮಾಡಿದವರಿಗೆ ಧನ್ಯವಾದಗಳನ್ನು ಅರ್ಪಿಸುತ್ತಾ:
ಬ್ರಹ್ಮಶ್ರೀ. ರಾಘವೇಂದ್ರ ಉಪಾಧ್ಯಾಯ, ಉಚ್ಚಿಲ, ಶ್ರೀ. ಅವಿನಾಶ್ ಪೂಜಾರಿ, ಶ್ರೀ. ಗಂಗಾಧರ ಕಾಂಚನ್, ಶ್ರೀ. ರಾಮಚಂದ್ರ ಭಟ್, ಕಟಪಾಡಿ, ಶ್ರೀ. ಹರೀಶ್ ರಾವ್, ಕಟಪಾಡಿ, ಶ್ರೀ. ದೂಮ್ರಾಣಿ ಭಟ್, ಉಚ್ಚಿಲ, ಶ್ರೀ. ವೆಂಕಟ ಜೋಯಿಸ್, ಉಚ್ಚಿಲ, ಶ್ರೀ. ದೇವಿ ಪ್ರಸಾದ ಭಟ್, ಉಚ್ಚಿಲ, ಶ್ರೀ. ವಾದಿರಾಜ ಭಟ್ ಪಣಿಯೂರ್, ಶ್ರೀ. ಎಸ್. ಕೆ. ಉಚ್ಚಿಲ, ಶ್ರೀ. ಸತೀಶ್ ಪೂಜಾರಿ, ಕಟಪಾಡಿ, ಶ್ರೀ. ವಾಸುದೇವ ಆಚಾರ್ಯ ಉಡುಪಿ, ಶ್ರೀ. ಗಜೇಂದ್ರ ಆಚಾರ್ಯ, ಬಾರ್ಕೂರು, ಶ್ರೀ. ಮೋಹನ್ ಗಟ್ಟಿ, ಉಲ್ಲಾಳ, ಶ್ರೀ. ಶಿವರೆಡ್ಡಿ, ಶ್ರೀಶೈಲಂ, ಶ್ರೀ. ಶ್ರೀಧರ್ ಹೆಗ್ಗಡೆ, ಹೊನ್ನಾವರ, ಶ್ರೀ. ಭಾಸ್ಕರ ಶರ್ಮ, ಶ್ರೀ. ರಜೀಬ್ ಶರ್ಮ, ಶ್ರೀ. ವಿರಾಜ್ ಶರ್ಮ, ಗುವಾಹಟಿ, ಶ್ರೀ. ಮನೋಜ್ ಶರ್ಮ, ಗುಪ್ತಕಾಶಿ, ಶ್ರೀ. ಚಂದ್ರಶೇಖರ್ ಭಟ್, ಕಾಳಮಠ, ಗುಪ್ತಕಾಶಿ, ಶ್ರೀ. ಪವನ್ ಆಚಾರ್ಯ, ಹರಿದ್ವಾರ, ಶ್ರೀಮತಿ.. ಸೋನಲ್ ನಾಯಕ್, ಸಿಡ್ನಿ, ಕುಮಾರಿ. ಮೋನಾ ಗುಪ್ತ, ಚಂಡೀಘಡ್, ಶ್ರೀ. ಅನಂತ ಶರ್ಮ, ಶ್ರೀ. ಮಧುಸೂದನ್, ಬಂಗೇರ, ಮುಂಬೈ, ಶ್ರೀ. ಜೋಯ್‌ದೀಪ್ ಮುಖರ್ಜಿ, ಕೋಲ್ಕತ್ತಾ, ಶ್ರೀ. ಉದಯ್ ಬಂಗೇರ, ಕಾರ್ಕಳ, ಶ್ರೀಮತಿ. ಪ್ರಿಯಾಂಕ, ಪೂನಾ, ಶ್ರೀ. ಪುಷ್ಪೇಂದ್ರ ಅಗರ್‌ವಾಲ್, ನವದೆಹಲಿ, ಶ್ರೀಮತಿ. ಪ್ರಮಿಳಾ ಮುದಳಿಯಾರ್, ಚೆನ್ನೈ, ಶ್ರೀಮತಿ. ಪದ್ಮಿನಿ ಶ್ರೇಯಸ್, ಹೈದಾರಾಬಾದ್, ಶ್ರೀ. ರಮಾಮಣಿ ಐಯ್ಯಂಗಾರ್, ಹೈದಾರಾಬಾದ್, ಶ್ರೀ. ನೀಲಕಂಠ ಹೆಗ್ಗಡೆ, ಮೈಸೂರು, ಶ್ರೀಮತಿ. ಆಶಾ ರಮೇಶ್, ಪುತ್ತೂರ್, ಶ್ರೀ. ಪ್ರವೀಣ್ ಮಂಚಿ, ಮಂಗಳೂರು, ಶ್ರೀ. ಸತೀಶ್ ಶೆಟ್ಟಿ, ಮಂಗಳೂರು ಮತ್ತು ಹಲವಾರು ಸ್ನೇಹಿತರು / ಹಿತೈಷಿಗಳು.